ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆಗೆ ಸಂಬಂಧ ಪಟ್ಟವರಿಂದ ಉತ್ತರ ತರಿಸಿಕೊಡುತ್ತೇನೆ.

೭) ಚಿಂಚೋಳಿ ತಾಲ್ಲೂಕಿನಲ್ಲಿರುವ ೪೦ ಹಳ್ಳಿಗಳ ತೆಲುಗು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಕಲಿಸಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲೂಕಿನಲ್ಲಿ ತೆಲುಗು ಮಾತನಾಡುವ ಸುಮಾರು ೪೦ ಹಳ್ಳಿಗಳ ಜನರ ಅನುಕೂಲಕ್ಕಾಗಿ ತೆಲುಗು ಭಾಷೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಒದಗಿಸಲಾಗುತ್ತಿದೆ. ಆದರೆ ತಾಲೂಕಿನಲ್ಲಿ ತೆಲುಗು ಮಾಧ್ಯಮದ ಪ್ರೌಢಶಾಲೆ ಅಥವಾ ಕಿರಿಯ ಮಹಾವಿದ್ಯಾಲಯ ಇರದ ಕಾರಣ ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣವನ್ನು ಮುಗಿಸಬೇಕಾಗುತ್ತದೆ. ಒಂದು ವೇಳೆ ಯಾರಾದರು ಅನುಕೂಲತೆ ಮಾಡಿಕೊಂಡು ಪಕ್ಕದ ಆಂಧ್ರ ಪ್ರದೇಶದ ಗ್ರಾಮಗಳಲ್ಲಿ ಪ್ರೌಢ ಶಿಕ್ಷಣ ಪಡೆದರೆ ಉನ್ನತ ಶಿಕ್ಷಣ ಹಾಗೂ ಕರ್ನಾಟಕದಲ್ಲಿ ಸರಕಾರಿ ಸೇವೆಯಲ್ಲಿ ಸೇರುವುದು ಸಾಧ್ಯವಾಗುತ್ತಿಲ್ಲ. ಈಗ ಭಾಗದ ಜನರು ಈ ಕನ್ನಡದಲ್ಲಿ ಶಿಕ್ಷಣ ಪಡೆಯಲು ಸಿದ್ಧರಿದ್ದಾಗ್ಯೂ ಸ್ಥಳೀಯ ಶಿಕ್ಷಕರು ತಾವು ಅಲ್ಲಿಂದ ಸ್ಥಳಾಂತರಗೊಳ್ಳಬೇಕಾಗುತ್ತದೆ ಎನ್ನುವ ಒಂದೇ ಒಂದು ಕಾರಣದಿಂದ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲಿಚ್ಚಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವುದಿಲ್ಲ. ಆದುದರಿಂದ ಸರಕಾರ ಕೂಡಲೇ ಈ ಶಾಲೆಗಳಲ್ಲಿ ಸ್ವಇಚ್ಛೆಯಿಂದ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯಲಿಚ್ಚಿಸುವವರಿಗೆ ಕನ್ನಡ ಶಿಕ್ಷಕರ ಅನುಕೂಲ ಮಾಡಿಕೊಡಬೇಕೆಂದು ಹಾಗೂ ತಾಲೂಕಿನಲ್ಲಿ ಒಂದಾದರೂ ತೆಲುಗು ಮಾಧ್ಯಮದ ಪ್ರೌಢಶಾಲೆ ಪ್ರಾರಂಭಿಸಬೇಕೆಂದು ಕೋರುತ್ತೇನೆ.

ಶ್ರೀ. ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

೮) ಘಟಪ್ರಭಾ ಯೋಜನೆಯ ಬಲದಂಡೆ ಕಾಲುವೆಯ ಕುರ್ಣಿ ಹಾಗೂ ಕೋಸರಿ ಕಾಲುವೆಗಳ ನಿರ್ಮಾಣಕಾರ್ಯ ಸ್ಥಗಿತಗೊಂಡಿರುವುದರ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಘಟಪ್ರಭಾ ಯೋಜನೆಯ ಬಲದಂಡೆ ಕಾಲುವೆಯಿಂದ ಕುರ್ಣಿ ಹಾಗೂ ಕೋಸರಿ ಕಾಲುವೆಗಳ ನಿರ್ಮಾಣ ಕಾರ್ಯವು ೧೯೮೫ರ ಒಳಗಾಗಿ ಪೂರ್ತಿಯಾಗಬೇಕಾಗಿತ್ತು. ಕುರ್ಣಿ ಫ್ಲೋ ಕೆನಾಲದ ಕೆಲಸವು ಯರಗಟ್ಟಿ ಗ್ರಾಮದ ಹತ್ತಿರ ಸ್ಥಗಿತಗೊಂಡಿದ್ದು ಮೂಲ ಯೋಜನೆಯ ಪ್ರಕಾರದ ಆದನ್ನು ಪೂರ್ತಿಗೊಳಿಸುವುದು ಜನರಲ್ಲಿ ಒತ್ತಾಯವಿದೆ. ಕುರ್ಣಿ ಹಾಗೂ ಕೋಸರಿ ೧,೨,೩, ಮೂಲ ಯೋಜನೆಯ ಪ್ರಕಾರ ಕೆಲಸ ಮಾಡುವಂತೆ ಜನರ ಒತ್ತಾಯವಿದ್ದು, ಕೆಲಸಕ್ಕೆ ಬರಬೇಕಾದ ಗತಿ ಬಾರದೆ ಇರುವುದರಿಂದ ಜನರ ಆರ್ಥಿಕ ಮಟ್ಟವು ಸುಧಾರಣೆಯಲ್ಲಿ ತೊಂದರೆಯುಂಟಾಗಿದೆ.

ಕುರ್ಣಿ ಹಾಗೂ ಕೋಸರಿ ೧, ೨, ೩, ಯಾತ ನೀರಾವರಿಯ ಕೆಲಸವನ್ನು ಬದಲಾವಣೆ ಮಾಡಂತ್ತಿರುವುದು ಸರಿಯಲ್ಲವೆಂದು ಜನರ ಅಭಿಪ್ರಾಯ. ಮೂಲ ಯೋಜನೆಯಂತೆ ಈ ಕೆಲಸವನ್ನು ಪೂರ್ತಿ ಮಾಡುವುದಕ್ಕಾಗಿ ಸರಕಾರವನ್ನು ಒತ್ತಾಯಿಸಂತ್ತಾ ನೀರಾವರಿ ಮಂತ್ರಿಗಳು ಅಥವಾ ಲೋಕೋಪಯೋಗಿ ಮಂತ್ರಿಗಳು ಈ ಬಗ್ಗೆ ಸದನದಲ್ಲಿ ವಿವರವಾದ ಹೇಳಿಕೆ ನೀಡುವಂತೆ ಒತ್ತಾಯಿಸಂತ್ತಾ ಜನರ ಪರವಾಗಿ ಸತ್ಯಾಗ್ರಹಕ್ಕೆ ಇಳಿಯುವ ಪ್ರಸಂಗ ಬರಬಾರದೆಂದು ಅಪೇಕ್ಷಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆಗೆ ಸಂಬಂಧಪಟ್ಟವರಿಂದ ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಮಲ್ಲಾರಿ ಗೌಡರು ಕೋಪ ಮಾಡಿಕೊಳ್ಳುವುದು ಬೇಡ.